ಮನುಷ್ಯರು ಪ್ರವೇಶಿಸಿದೊಡನೆ ದೇಹಕ್ಕೆ ಜೀವಸಂಚಾರವಾದಂತೆ, ಪ್ರತಿಮೆಗೆ ಪ್ರಾಣಪ್ರತಿಷ್ಠೆ ಮಾಡಿದಂತೆ, ತನಗೊಂದು ವ್ಯಕ್ತಿತ್ವ ಪಡೆದುಕೊಳ್ಳುತ್ತದೆ. ಅದರ ಛತ್ತಿನಡಿ ಮಲಗುವ, ಕನಸುಗಾಣುವ, ಭೋಗಿಸುವ, ಹೆರುವ, ಉಣ್ಣುವ, ಕುಡಿಯುವ, ಜಗಳಾಡುವ, ಸಾಯುವ ನಗುವ, ಅಳುವ ಎಷ್ಟೆಲ್ಲ ಚಟುವಟಿಕೆ ನಡೆಯುತ್ತವೆ. 'ಬೆಚ್ಚನ್ನ ಮನೆಯಾಗಿ' ಎನ್ನುವಾಗ ಸರ್ವಜ್ಞನ ಮನಸಿನಲ್ಲಿದ್ದುದು ಸೋರದ ಮನೆಯಲ್ಲ; ಆಪ್ತಭಾವದಲ್ಲಿ ನೆಮ್ಮದಿ ಅನುಭವಿಸುವ ತಾಣ. ಕಟ್ಟಡ ಮತ್ತು ಮನೆಗಳಿಗಿರುವ ಫರಕನ್ನು 'ಹೌಸ್' ಮತ್ತು 'ಹೋಂ'ಗಳು ಚೆನ್ನಾಗಿ ಪ್ರತಿನಿಧಿಸುತ್ತವೆ. ಪ್ರವಾಹದಲ್ಲೊ ಭೂಕಂಪದಲ್ಲೊ ಗಲಭೆಗಳಲ್ಲೊ ಮನೆ ಕಳೆದುಕೊಂಡವರು ಪ್ರಲಾಪಿಸುವುದು ಕಟ್ಟಡ ಬಿದ್ದ ಆರ್ಥಿಕ ನಷ್ಟಕ್ಕಲ್ಲ; ಮನೆಯೊಂದಿಗಿದ್ದ ಮಾನುಷ ಸಂಬಂಧದ ಸ್ಮೃತಿಗಳು ಭಗ್ನಗೊಂಡಿದ್ದಕ್ಕೆ. 'ನಿನ್ನ ಮನೆಹಾಳಾಗ','ಮನೆಮುರುಕ' ಇತ್ಯಾದಿ ಶಾಪ ಬೈಗುಳಗಳನ್ನು ಗಮನಿಸಬೇಕು. ಮನೆನಾಶವು ಜೀವನದ ನಾಶವೆಂದೇ ಜನ ಪರಿಭಾವಿಸುವರು.

ಸುಳ್ಳಲ್ಲ, ನಾವು ಬಾಡಿಗೆ ಮನೆಗಳಲ್ಲಿ ಸಿಗದ ಸುಖ ಸಂತಸವನ್ನು ಖುದ್ದಾಗಿ ನಿಂತು ಕಟ್ಟಿಸಿದ ಸ್ವಂತಮನೆಯಲ್ಲಿ ಯಥೇಚ್ಛ ಅನುಭವಿಸಿದೆವು. ಆದರೆ ಮಕ್ಕಳು ಬೆಳೆದು ತಮ್ಮದೇ ಮನೆಗಳಿಗೆ ಹೋಗುತ್ತಿದ್ದಂತೆ, ತುಂಬಿದ ಮನೆ ಬರಿಯ ಕಟ್ಟಡವಾಗುತ್ತಿದೆ; ಆಯುಷ್ಯಸೂರ್ಯ ಪಡುವಣಕ್ಕೆ ವಾಲುತ್ತಿದ್ದಂತೆ ಬಾಲ್ಯದ ಊರುಮನೆ ಕೈಬೀಸತೊಡಗಿವೆ. ವೃತ್ತಿಜೀವನದಲ್ಲಿ ದೇಶಾಂತರ ಹೋದವರು ಅಂತಿಮ ದಿನಗಳನ್ನು ಹುಟ್ಟಿದೂರಲ್ಲಿ ಕಳೆಯಲು ಬಯಸುವರು. ನಾನು ಬಲ್ಲಂತೆ ದೊರೆಯಂತೆ ಬಾಳಿದವರೊಬ್ಬರು, ಜೀವನಸಂಧ್ಯೆಯನ್ನು ಹುಟ್ಟಿದ ಮನೆಯಲ್ಲಿ ಕಳೆಯಲು ಹಳ್ಳಿಗೆ ಬಂದರು. ಸೌಲಭ್ಯದ ದೃಷ್ಟಿಯಿಂದ ಪಡಬಾರದ ಪಾಡುಪಡುತ್ತಿದ್ದರೂ ಅವರಲ್ಲಿ ಅಪೂರ್ವ ನೆಮ್ಮದಿ ನೆಲೆಸಿತ್ತು. ಮನೆಗೂ ಮಣ್ಣಿಗೂ ಎಂತಹುದೊ ನಂಟು. 'ಮರಳಿ ಮಣ್ಣಿಗೆ' ಎಂದರೆ ಮಣ್ಣಲ್ಲಿ ಮಲಗಲು ಬರುವುದು ಎಂಬರ್ಥವೂ ಇದೆಯಷ್ಟೆ. ಥಂಡಿ ಗಾಳಿ ಬಿಸಿಲು ಮಳೆಗಳಿಂದ ಜನರನ್ನು ಕಾಪಾಡುವ ಮನೆ, ಭೂಕಂಪವೊ ಜೋರಾದ ಮಳೆಯೊ ಬಂದಾಗ, ಹೊಟ್ಟೆಯಲ್ಲಿದ್ದ ಮಗುವನ್ನು ತಾಯಿಯೇ ಹಿಸುಕಿ ಕೊಲ್ಲುವಂತೆ, ನಿವಾಸಿಗಳ ಜೀವಂತ ಸಮಾಧಿ ಮಾಡುವುದುಂಟು. ಉರ್ದುವಿನಲ್ಲಿ ದಫನ್‌ಗುಂಡಿಗೆ 'ಘರ್' ಎನ್ನುವರು. 'ಅಲ್ಲಿದೆ ನಮ್ಮ ಮನೆ' ಎಂದು ಗೊತ್ತಿದ್ದರೂ ಇಲ್ಲಿನದನ್ನು ಶಾಶ್ವತವೆಂಬಂತೆ ಅನುಭವಿಸುವುದು ತಾನೇ ಬಾಳು? ಎರಡಕ್ಷರದ ಪುಟ್ಟಶಬ್ದ 'ಮನೆ' ಎಷ್ಟೊಂದು ಕೋಲಾಹಲ ತುಂಬಿಕೊಂಡಿದೆ?

ಹೌದು, ಹುಟ್ಟಿದೂರಿನ ಮನೆಗೆ ಮರಳಿದರೆ, ನಗರದಲ್ಲಿ ಕಟ್ಟಿದ ಮನೆಗಳು ಏನಾಗುತ್ತವೆ? ಅವುಗಳಲ್ಲಿ ಮಕ್ಕಳು ಮೊಮ್ಮಕ್ಕಳು ಬಾಳಬಹುದು. ಅವರು ಮನೆಯನ್ನು ಕಟ್ಟಡವಾಗಿಸಿ ಮಾರಬಹುದು. ತಮ್ಮಲ್ಲೇ ಉಳಿಸಿಕೊಂಡರೆ ಮೂಲರೂಪ ಬದಲಿಸಬಹುದು. ಪೂರ್ವಜರಿಂದ ಪಡೆದ ಮನೆಯ ರೂಪಬದಲು ಮಾಡುವುದು ಉತ್ತರಾಧಿಕಾರಿಗಳ ಹಕ್ಕು. ಅಮ್ಮ ಕಟ್ಟಿದ ಮನೆಯ ಹಿತ್ತಲನ್ನು ತರಕಾರಿ ಬೆಳೆಯಲೆಂದು ಅಗತೆ ಮಾಡುವಾಗ ಮಡಕೆ, ಬಳೆಚೂರು ಸಿಗುತ್ತಿದ್ದವು. ಬಹುಶಃ ಅಲ್ಲಿ ಹಿಂದೆ ಯಾರದ್ದೊ ಮನೆ ಇದ್ದಿರಬೇಕು. ಅದರ ಅವಶೇಷಗಳ ಮೇಲೆ ಅಮ್ಮನ ಮನೆ ಮೂಡಿತ್ತು. ಮುಂದೆ ಆ ಮನೆಯನ್ನು ಖರೀದಿಸಿದವರು ಕೊಟ್ಟಿಗೆಯನ್ನಾಗಿ ಮಾಡಿಕೊಂಡರು. ಅಪ್ಪನೆದುರು ಮನೆಕಟ್ಟಿದ ಸಾಹಸಗಾಥೆಯನ್ನು ಗರ್ವದಿಂದ ನಿರೂಪಿಸುತ್ತಿದ್ದ ಅಮ್ಮ, ಈ ಪಲ್ಲಟವನ್ನು ಹೇಗೆ ಸ್ವೀಕರಿಸಿದಳೊ? ಅರಮನೆಗಳಾಗಿ ಮೆರೆದವು ಮುಂದಿನ ತಲೆಮಾರಿನಲ್ಲಿ ಕೈಕಾಲಿಗೆ ಸಿಗುವ ತಬ್ಬಲಿಗಳಾಗುತ್ತವೆ. ದೃಢವಾಗಿ ನಿಂತು ಮನೆಮಂದಿಯನೆಲ್ಲ ಕಾಪಾಡಿದ ಮನೆ, ಮುಪ್ಪು ಹಿಡಿದು, ಗಾರೆ ಉದುರಿಸುತ್ತ, ನೆಗಡಿ